# ಗರ: ಹಳೆಬೇರು ಮತ್ತು ಚಿಗುರು



ಬಂಧು ಮಿತ್ರರಿಂದ ದೇಗುಲ ತುಂಬಿ ತುಳುಕುತ್ತಿತ್ತು. ಅದು ಮದುವೆಯ ಸಂಭ್ರಮ. ಮಲಯಾಳಿ ಚೆಲುವೆ ಅವಂತಿಕಾ ಮೋಹನ್ ಮದುವಣಗಿತ್ತಿಯ ಪೋಷಾಕಿನಲ್ಲಿದ್ದರು. ಗಟ್ಟಿಮೇಳ ಯಾವ ಕ್ಷಣದಲ್ಲಾದರೂ ಮೊಳಗ ಬಹುದಿತ್ತು. ಆದರೆ, ನಿರ್ದೇಶಕ ಮುರಳೀಕೃಷ್ಣ ಅವರಿಗೆ ಮಾತನಾಡುವ ಉಮೇದು.

ಅದು 'ಗರ' ಚಿತ್ರದ ಚಿತ್ರೀಕರಣ. ಮುರಳೀಕೃಷ್ಣ ಚಿತ್ರದ ನಿರ್ದೇಶಕರು ಮಾತ್ರವಲ್ಲ, ನಿರ್ಮಾಣದ ಜವಾಬ್ದಾರಿಯೂ ಅವರದೇ. ಆರ್.ಕೆ. ನಾರಾಯಣ್ ಅವರ ಸಣ್ಣಕಥೆಯನ್ನು ಆಧರಿಸಿದ ಚಿತ್ರವನ್ನು ದೀಪಾವಳಿ ವೇಳೆಗೆ ಚಿತ್ರಮಂದಿರಗಳಿಗೆ ತರುವ ಉಮೇದು ಅವರದು. ತಮ್ಮ ಚಿತ್ರಕ್ಕಾಗಿ ಆಕರ್ಷಕ ತಾರಾಗಣವನ್ನು ಅವರು ಕಲೆ ಹಾಕಿದ್ದಾರೆ. 'ಬಿಗ್ ಬಾಸ್' ರಿಯಾಲಿಟಿ ಶೋ ಖ್ಯಾತಿಯ ರೆಹಮಾನ್ ಚಿತ್ರದ ನಾಯಕ. ಆರ್ಯನ್, ಅವಂತಿಕಾ ಹಾಗೂ ನೇಹಾ ಪಾಟೀಲ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಇವರ ಜೊತೆಗೆ, ರೂಪಾದೇವಿ, ರಾಮಕೃಷ್ಣ, ರಮೇಶ್ ಭಟ್, ಪದ್ಮಜಾರಾವ್, ಮಿಮಿಕ್ರಿ ದಯಾನಂದ್ – ಹೀಗೆ ಅನುಭವಿ ಕಲಾವಿದರು ಕೂಡ 'ಗರ' ಬಳಗದಲ್ಲಿದ್ದಾರೆ.

ಆರ್ಯನ್ ಹಾಗೂ ರೆಹಮಾನ್ ಇಬ್ಬರದೂ ಚಿತ್ರದಲ್ಲಿ ಪ್ರಮುಖ ಪಾತ್ರಗಳು. ನಿರ್ದೇಶಕರಿಂದ ಕಥೆ ಕೇಳಿದ ನಂತರ, ರೆಹಮಾನ್ ನೆಗೆಟಿವ್ ಶೇಡ್‌ನ ಪಾತ್ರ ಆಯ್ದುಕೊಂಡರೆ, ಆರ್ಯನ್ ಧನಾತ್ಮಕ ಆಯಾಮದ ಪಾತ್ರ ತಮ್ಮದಾಗಿಸಿ ಕೊಂಡಿದ್ದಾರೆ. ಇವರಿಬ್ಬರ ಕಣ್ಣಾಮುಚ್ಚಾಲೆಯೇ ಚಿತ್ರಕಥೆಯ ಪ್ರಮುಖ ಹೂರಣ. ಕಥೆಯಲ್ಲಿ ಸಾಕಷ್ಟು ತಿರುವುಗಳೂ ಸ್ವಾರಸ್ಯವೂ ಇದೆಯಂತೆ. ದೀರ್ಘ ಕಾಲದ ನಂತರ ರೂಪಾದೇವಿ ಬೆಳ್ಳಿತೆರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಮುರಳೀಕೃಷ್ಣ ಅವರ ಪ್ರೀತಿಯ ಒತ್ತಾಯದ ಕಾರಣದಿಂದಾಗಿ ನಟಿಸಲಿಕ್ಕೆ ಅವರು ಮತ್ತೆ ಒಪ್ಪಿಕೊಂಡಿದ್ದಾರೆ.

ವೇಣು ಅವರ ಛಾಯಾಗ್ರಹಣ ಹಾಗೂ ಸಾಗರ್ ಗುರುರಾಜ್ ಸಂಗೀತ ಚಿತ್ರಕ್ಕಿದೆ. ಚಿತ್ರದ ಎಂಬತ್ತು ಭಾಗದಷ್ಟು ಚಿತ್ರೀಕರಣ ಮುಗಿದಿದ್ದು, ಉಳಿದ ಭಾಗವನ್ನೂ ಬೇಗನೆ ಮುಗಿಸುವ ಉಮೇದು ಮುರಳೀಕೃಷ್ಣ ಅವರದು.

# ಕಾಡಿನ ಹಾದಿಯಲ್ಲಿ...



ಸುಳಿದಲ್ಲೆಲ್ಲ ಮಂದಹಾಸ ತುಳುಕಿಸುತ್ತಿದ್ದ ಶ್ರುತಿ ಹರಿಹರನ್ ಹಾಗೂ ಗಂಭೀರವದನರಾಗಿದ್ದ ವಸಿಷ್ಠ ಸಿಂಹ ಕಾರ್ಯಕ್ರಮದ ಕೇಂದ್ರಬಿಂದುಗಳು. ಅದು '6ನೇ ಮೈಲಿ' ಚಿತ್ರದ ಪೋಸ್ಟರ್ ಅನಾವರಣದ ಸಂಭ್ರಮ. ಶ್ರೀನಿ ನಿರ್ದೇಶನದ ಈ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿದ ಶ್ರುತಿ, ಯಶಸ್ಸಿನ ಮೈಲಿಗಲ್ಲುಗಳನ್ನು ಸಿನಿಮಾ ಸಾಧಿಸಲಿ ಎನ್ನುವ ಆಶಯ ವ್ಯಕ್ತಪಡಿಸಿದರು. ಶ್ರೀನಿ ಅವರ ಸಿನಿಮಾ ಬದ್ಧತೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ ವಸಿಷ್ಠ ಅವರಿಗೆ, ಸಿನಿಮಾ ಗೆಲ್ಲುವ ಬಗ್ಗೆ ಅಪಾರ ಭರವಸೆ ಇದ್ದಂತಿತ್ತು.

ಇಪ್ಪತ್ತೊಂದು ದಿನಗಳ ಕಾಲ ಹಗಲಿರುಳನ್ನು ಲೆಕ್ಕ ಹಾಕದೆ ಚಿತ್ರೀಕರಣ ಮುಗಿಸಿರುವ ಚಿತ್ರತಂಡ, ಇದೀಗ ಡಬ್ಬಿಂಗ್ ಮನೆಯತ್ತ ಹೆಜ್ಜೆಹಾಕಿದೆ. ಚಿತ್ರದ ಗೀತೆಗಳ ರೆಕಾರ್ಡಿಂಗ್ ಅನ್ನು ಲಂಡನ್‌ನಲ್ಲಿ ನಡೆಸಲು ನಿರ್ದೇಶಕರು ಉದ್ದೇಶಿಸಿದ್ದಾರೆ. ಯಲ್ಲಾಪುರ, ಶಿರಸಿ ಪರಿಸರದಲ್ಲಿ ಚಿತ್ರೀಕರಣ ನಡೆಸಿರುವ ಅವರು ಅಪ್ಪಟ ಥ್ರಿಲ್ಲರ್ ಕಥನವೊಂದನ್ನು ರೂಪಿಸಿರುವ ಖುಷಿಯಲ್ಲಿದ್ದಾರೆ. ಅಕ್ಟೋಬರ್‌ನಲ್ಲಿ ಸಿನಿಮಾ ತೆರೆ ಕಾಣಿಸುವ ಯೋಚನೆ ಅವರದು.

ಪಶ್ಚಿಮ ಘಟ್ಟದಲ್ಲಿ ಚಾರಣಕ್ಕೆ ಹೊರಟವರು ಕಣ್ಮರೆಯಾಗುವ ಕಥನವನ್ನು ಶ್ರೀನಿ ಚಿತ್ರಕಥೆಯಾಗಿ ಹೆಣೆದಿದ್ದಾರೆ. ಕಾಡಿನ ದಾರಿಯಲ್ಲಿ ಹೆಜ್ಜೆಹೆಜ್ಜೆಗೂ ಪ್ರೇಕ್ಷಕರನ್ನು ತಣಿಸುವ ಹಾಗೂ ಕಂಗೆಡಿಸುವ ದೃಶ್ಯಗಳಿವೆಯಂತೆ. ಮನುಷ್ಯ ಸ್ವಭಾವದ ಸಂಕೀರ್ಣತೆಯ ಜೊತೆಗೆ ಕಾಡಿನ ನಿಗೂಢತೆಯನ್ನು ಕಾಣಿಸುವ ಪ್ರಯತ್ನ ನಿರ್ದೇಶಕರದು.

ಸಂಚಾರಿ ವಿಜಯ್ '6ನೇ ಮೈಲಿ' ಚಿತ್ರದ ನಾಯಕ. ತಮ್ಮ ವೃತ್ತಿಜೀವನದ ಅತ್ಯುತ್ತಮ ಚಿತ್ರಗಳಲ್ಲಿ ಇದೂ ಒಂದಾಗಲಿದೆ ಎನ್ನುವ ವಿಶ್ವಾಸ ಅವರದು. ನಿರ್ದೇಶಕ ಶ್ರೀನಿ ಅವರ ಭಿನ್ನ ನಿರೂಪಣೆ ಚಿತ್ರದ ಹೈಲೈಟ್ ಎನ್ನುವುದು ಅವರ ಅನಿಸಿಕೆ. ರೇಡಿಯೊ ಜಾಕಿಗಳಾದ ಸುದೇಶ್ ಹಾಗೂ ನೇತ್ರಾ ತಾರಾಗಣದಲ್ಲಿರುವ ಪ್ರಮುಖರು.

■ ರಘು